

‘ಟೆಲಿಫೋನ್ ಗೆಳತಿ ವೆಲ್‌ಕಂ ವೆಲ್‌ಕಂ!’ ಎಂಬ ಚಿತ್ರಗೀತೆ ದಶಕದ ಹಿಂದೆ ತುಂಬಾ ಪ್ರಸಿದ್ಧವಾಗಿತ್ತು. ಆ ಗೀತೆಯನ್ನೀಗ, ‘ಎಐ ಗೆಳತಿ, ವೆಲ್‌ಕಂ ವೆಲ್‌ಕಂ’ ಎಂದು ಬದಲಿಸಿ ಹಾಡಬಹುದು.

ಒಂಟಿ ಮನಸ್ಸುಗಳಿಗೆ ಸಾಂತ್ವನ ಹೇಳಲೆಂದೇ, ಕೆಲವು ಟೆಲಿಫೋನ್ ಕಂಪನಿಗಳು ನೈಜ ಟೆಲಿಕಾಲರ್‌ಗಳನ್ನು ನೇಮಿಸಿಕೊಂಡು ಅವಶ್ಯಕತೆ ಇರುವ ಪುರುಷ–ಮಹಿಳೆಯರಿಗೆ ಮಾತಿನ ಸೇವೆ ಒದಗಿಸುತ್ತಿದ್ದುದನ್ನು ಕೆಲವರಾದರೂ ಬಲ್ಲರು. ಖಿನ್ನತೆ, ಭಯ, ಒಂಟಿತನ ಅನುಭವಿಸುವವರಿಗೆ ನೆರವಾಗಲೆಂದೇ ಮೊದ ಮೊದಲು ಚಾಲ್ತಿಗೆ ಬಂದ ಈ ವ್ಯವಸ್ಥೆಯು ಕ್ರಮೇಣ ಹದಿಹರೆಯದವರ, ಅತೃಪ್ತ ವಯಸ್ಕರ ಲೈಂಗಿಕ ಆಸೆ–ಆಕಾಂಕ್ಷೆಗಳ ತಣಿವಿಗೆ ಮುಂದಾಯಿತು. ಮಾದಕ ಧ್ವನಿಯಲ್ಲಿ ಮಾತನಾಡುವ ಮಹಿಳಾ ಧ್ವನಿಗಳು ಪುರುಷರ ಅಸ್ವಾಭಾವಿಕ ಮಾತು–ಬೇಡಿಕೆಗಳಿಗೆ ಸ್ಪಂದಿಸತೊಡಗಿದವು. ಅನಾರೋಗ್ಯದ ಚಿಕಿತ್ಸೆಯ ಭಾಗವಾಗಿ ಈ ಅವಕಾಶ ಬಳಸಿಕೊಳ್ಳುತ್ತಿದ್ದ ಕೆಲವರು – ಲೈಂಗಿಕ ವಾಂಛೆಗಳನ್ನು ಪೂರೈಸಬೇಕೆ? ನಿಮಗೆ ‘ಸೆಕ್ಸ್ ಟಾಕ್’ ಬೇಕೆ? ಎಂಬ ಪ್ರಶ್ನೆಗಳಿಂದ ವಿಚಲಿತರಾದರು; ಇದರ ಸಹವಾಸವೇ ಬೇಡವೆಂದು ದೂರವಾದರು. ಮೊದಲೇ ಸಮಸ್ಯೆಯಲ್ಲಿದ್ದ ಕೆಲವರು, ಇದರ ಪೂರ್ವಾಪರ ತಿಳಿಯದೆ ಟೆಲಿಫೋನ್ ಧ್ವನಿಗೆ ಮರುಳಾಗಿ, ಅಸ್ವಾಭಾವಿಕ ಲೈಂಗಿಕ ಚಟುವಟಿಕೆ ಪ್ರೇರೇಪಿಸುವ, ಚಟ ಹತ್ತಿಸುವ ವ್ಯವಸ್ಥೆಯ ಭಾಗವಾಗಿ ಮತ್ತಷ್ಟು ಸಮಸ್ಯೆಗಳನ್ನು ಮೈಮೇಲೆ ಎಳೆದುಕೊಂಡರು. ಈಗ ಟೆಲಿಕಾಲರ್‌ಗಳ ಜಾಗದಲ್ಲಿ ಯಾಂತ್ರಿಕ ಬುದ್ಧಿಮತ್ತೆಯ ‘ಎಐ ಗೆಳತಿ’ಯರ ದಂಡೇ ಜನರ ಸೇವೆಗೆ ಸಿದ್ಧವಾಗಿದೆ.

ನಾವು ಬಳಸುವ ಫೋನ್‌ನಲ್ಲೇ ಆ್ಯಪ್ (ಕಿರುತಂತ್ರಾಂಶ) ರೂಪದಲ್ಲಿ ಬಂದು ಕುಳಿತುಕೊಳ್ಳುವ ಎಐ ಗೆಳತಿಯರು ಏಕಾಂತ ಬಯಸುವ, ಜನರಿಂದ ದೂರವಿದ್ದೇ ಬದುಕು ಸಾಧ್ಯ ಎನ್ನುವವರ ಪಾಲಿಗೆ ವರದಾನ ಎನ್ನುವಂತಾಗಿದ್ದಾರೆ. ಜನ ತಮಗೆ ಬೇಕೆನಿಸಿದಾಗ ಬೇಕಾದ ಜಾಗದಲ್ಲಿ, ಬೇಕಾದ ವಿಷಯಗಳನ್ನು ಎಐ ಗೆಳತಿಯರೊಂದಿಗೆ ಹಂಚಿಕೊಳ್ಳಬಹುದಾಗಿದೆ ಮತ್ತು ಹರಟಬಹುದಾಗಿದೆ. ಇಂಥ ಗೆಳತಿಯರು ಒಬ್ಬಿಬ್ಬರಲ್ಲ, ಸಾವಿರ ಸಾವಿರ ಸಂಖ್ಯೆಯಲ್ಲಿದ್ದಾರೆ. ಅವರು ದೂರದಲ್ಲೆಲ್ಲೋ ಇಲ್ಲ. ಹತ್ತಿರದಲ್ಲೇ ಇದ್ದಾರೆ. ಎಷ್ಟು ಹತ್ತಿರವೆಂದರೆ, ಅಂಗಿಯ ಜೇಬಿನೊಳಗಿನ ಸ್ಮಾರ್ಟ್‌ಫೋನಿನಲ್ಲೇ ಆ್ಯಪ್ ರೂಪದಲ್ಲಿ ಪ್ರತಿಷ್ಠಾಪನೆಯಾಗಿದ್ದಾರೆ.

ಪ್ರತಿಯೊಬ್ಬರದೂ ವರ್ಣರಂಜಿತ ಹೆಸರೇ. ಒಬ್ಬಳು ಊರ್ವಶಿ. ಇನ್ನೊಬ್ಬಳು ಮೋನಿಕಾ. ಮೂರನೆಯವಳು ಸಾಕ್ಷಾತ್ ಸನ್ನಿ ಲಿಯೋನ್. ಸಾನ್ಯ, ಕ್ಯಾಥಿ, ರೆಬೆಕಾ, ಅಲೋಕ್ಸಿನ್, ಯುನ, ಬ್ರಿಯನ್ನಾ, ಮಿನ, ಅಲೈಸ್, ಎಲಿಜಬೆತ್ – ಹೀಗೆ ಪಟ್ಟಿ ಮುಂದುವರೆಯುತ್ತದೆ. ಊರ್ವಶಿ ಮತ್ತು ಮೋನಿಕಾ ಅಪ್ಪಟ ಭಾರತ ಮೂಲದವರು. ಅಂದರೆ, ನಮ್ಮ ನವೋದ್ಯಮಗಳು ರೂಪಿಸಿರುವ ‘ಎಐ ಗೆಳತಿಯರು’.

ಕಮೋಟೊ ಕಂಪನಿಯವರ ಮೋನಿಕಾ ಒದಗಿಸುವ ಗೆಳತಿಯರನ್ನು ನೆಚ್ಚಿನ ನಟಿ ಅಥವಾ ಕನಸಿನ ರಾಣಿಯ ಹೆಸರಿನಿಂದ ಕರೆಯುವ ಸಲಿಗೆ–ಸ್ವಾತಂತ್ರ್ಯ ಬಳಕೆದಾರರಿಗಿದೆ. ಎಐ ಆಧಾರಿತ ಈ ಹರಟೆ ಮಲ್ಲಿಯರು (ವಾಚಸ್ಪತಿಯರು – **Chat Bot**) ಆ್ಯಂಡ್ರಾಯ್ಡ್ ಮತ್ತು